ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ರಾಯಚೂರು

ಸಂ./ಜಿಪಂರಾ/ಉಖಾಯೋ/ಹೂ ಮೂ/2022-23 ದಿನಾಂಕ 18.11.2022

ಗೆ,

ಮುಖ್ಯಸ್ಥರು,
M/S BKR Swamy Security Agency
#310 Pavilion Road, PJ Extension, Davanagera 577002

ಮಾನ್ಯರೇ,

ವಿಷಯ:- ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನಕ್ಕೆ ತಾಂತ್ರಿಕ ಸಹಾಯಕರ ಸೇವೆ ಒದಗಿಸುವ ಕುರಿತು.

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನಕ್ಕೆ ತಾಂತ್ರಿಕ ಸಹಾಯಕರ ಸೇವೆ ಅವಶ್ಯಕತೆ ಇದ್ದು, ಹುದ್ದೆಗಳ ಸಂಖ್ಯೆ, ಕನಿಷ್ಠ ವಿದ್ಯಾರ್ಹತೆ, ವಯೋಮಿತಿ, ಮಾಸಿಕ ಸಂಭಾವನೆಯನ್ನು ಈ ಕೆಳಗೆ ವಿವರಿಸಲಾಗಿದೆ.

ಅರ್ಹ ಅಭ್ಯರ್ಥಿಗಳು ಆನ್ ಲೈನ್ ಮೂಲಕ NIC ಜಿಲ್ಲಾ ವೆಬ್ ಸೈಟ್ ಮೂಲಕ ಅರ್ಜಿ ಸಲ್ಲಿಸಲು ಒದಗಿಸಲಾದ Link ಬಳಸಿಕೊಂಡು ಅರ್ಜಿ ಸಲ್ಲಿಸಲು ರಾಜ್ಯ ಮತ್ತು ಜಿಲ್ಲಾಮಟ್ಟದ ಪ್ರಚಲಿತ ದಿನಪತ್ರಿಕೆಗಳಲ್ಲಿ ಹೆಚ್ಚು ಹೆಚ್ಚು ಜಾಹಿರಾತು ನೀಡಿ ಪ್ರಚುರಪಡಿಸಲು ಸೂಚಿಸಲಾಗಿದೆ.

ವಿವರ ಈ ಕೆಳಗಿನಂತಿದೆ:-

| ಕ್ರ.ಸಂ | ಹುದ್ದೆಯ ಹೆಸರು | ಖಾಲಿ ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ ಹಾಗೂ ಅನುಭವ | ವಯೋಮಿತಿ |
|---|---|---|---|---|
| 01 | ತಾಂತ್ರಿಕ ಸಹಾಯಕರು (ಸಿವಿಲ್) | 02 | Diploma Civil/ B.E/B.Tech (Civil) ಹಾಗೂ ಸಂಬಂಧಿಸಿದ ಕ್ಷೇತ್ರದಲ್ಲಿ ಕನಿಷ್ಟ 3 ವರ್ಷ ಅನುಭವ ಹೊಂದಿರತಕ್ಕದ್ದು. B.E. (Civil) ಅಭ್ಯರ್ಥಿಗಳ ಅರ್ಜಿ ಬಂದಲ್ಲಿ Diploma Civil ಅಭ್ಯರ್ಥಿಯನ್ನು ಪರಿಗಣಿಸುವುದಿಲ್ಲ. | 21 ರಿಂದ 40 ವರ್ಷಗಳು |
| 02 | ತಾಂತ್ರಿಕ ಸಹಾಯಕರು (ತೋಟಗಾರಿಕೆ) | 01 | Graduation in Horticulture other equivalent qualification with computer knowledge. ಹಾಗೂ ಸಂಬಂಧಿಸಿದ ಕ್ಷೇತ್ರದಲ್ಲಿ ಕನಿಷ್ಟ 3 ವರ್ಷ ಅನುಭವ ಹೊಂದಿರತಕ್ಕದ್ದು | 21 ರಿಂದ 40 ವರ್ಷಗಳು |
| 03 | ತಾಂತ್ರಿಕ ಸಹಾಯಕರು (ಅರಣ್ಯ) | 02 | Graduation in Forest & other equivalent qualification with computer knowledge. ಹಾಗೂ ಸಂಬಂಧಿಸಿದ ಕ್ಷೇತ್ರದಲ್ಲಿ ಕನಿಷ್ಟ 3 ವರ್ಷ ಅನುಭವ ಹೊಂದಿರತಕ್ಕದ್ದು | 21 ರಿಂದ 40 ವರ್ಷಗಳು |

| | | | | |
|---|---|---|---|---|
| 04 | ತಾಂತ್ರಿಕ ಸಹಾಯಕರು<br>(ಕೃಷಿ) | 6 | Graduation in Agriculture and other equivalent qualification with computer knowledge.<br>ಹಾಗೂ ಸಂಬಂಧಿಸಿದ ಕ್ಷೇತ್ರದಲ್ಲಿ ಕನಿಷ್ಟ 3 ವರ್ಷ ಅನುಭವ ಹೊಂದಿರತಕ್ಕದ್ದು | 21 ರಿಂದ<br>40<br>ವರ್ಷಗಳು |

- ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ: 24-11-2022
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 03-12-2022
- ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನೆಗೆ ಜಿಲ್ಲಾ ಪಂಚಾಯತಿ ಕಾರ್ಯಾಲಯಕ್ಕೆ ಹಾಜರಾಗಬೇಕಾದ ದಿನಾಂಕ: .12-12-2022
- ಅಭ್ಯರ್ಥಿಗಳ ತಾತ್ಕಾಲಿಕ ಮೆರಿಟ್ ಪಟ್ಟಿಯನ್ನು ಪ್ರಕಟಣೆ ಮಾಡುವ ದಿನಾಂಕ: 15-12-2022
- ತಾತ್ಕಾಲಿಕ ಮರಿಟ್ ಪಟ್ಟಿಗಳಿಗೆ ಅಭ್ಯರ್ಥಿಗಳಿಂದ ಆಕ್ಷೇಪಣೆ ಸಲ್ಲಿಸುವ ದಿನಾಂಕ: 16-12-2022 ರಿಂದ 23-12-2022 ರವರೆಗೆ (ತದನಂತರದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ)
- ಸಲ್ಲಿಕೆಯಾದ ಆಕ್ಷೇಪಣೆಗಳನ್ನು ಪರಿಶೀಲನೆಮಾಡಿ ಅಂತಿಮ ಆಯ್ಕೆ ಪಟ್ಟಿ ಪ್ರಕಟಣೆ ಮಾಡುವ ದಿನಾಂಕ: 28-12-2022

**ಸೂಚನೆಗಳು :-**

- ಆಯ್ಕೆಯಾದ ಅಭ್ಯರ್ಥಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸಂಸ್ಥೆಯ ಮೂಲಕ ಸೇವೆಗೆ ಪಡೆಯಲಾಗುವುದು.
- ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಅರ್ಜಿ ನಮೂನೆಯಲ್ಲಿ ನಮೂದಿಸಿರುವ ದಾಖಲೆಗಳಾದ ವಿದ್ಯಾರ್ಹತೆ/ಸೇವಾನುಭವಕ್ಕೆ ಸಂಬಂಧಪಟ್ಟ ಎಲ್ಲಾ ಮೂಲ ಪ್ರಮಾಣ ಪತ್ರ/ದಾಖಲೆಗಳನ್ನು ಪರಿಶೀಲನಾ ಸಮಯದಲ್ಲಿ; ಕಡ್ಡಾಯಕವಾಗಿ ಹಾಜರುಪಡಿಸುವುದು ತಪ್ಪಿದಲ್ಲಿ ಅಭ್ಯರ್ಥಿಯ ಅರ್ಜಿಯನ್ನು ತಿರಸ್ಕರಿಸಲಾಗುವುದು.
- ದಾಖಲಾತಿ ಪರಿಶೀಲನೆಯಲ್ಲಿ ಅರ್ಹಗೊಂಡ ಅಭ್ಯರ್ಥಿಗಳನ್ನು ವಿದ್ಯಾರ್ಹತೆ ಹೊಂದಿದ ಅಂಕಗಳು ಹಾಗೂ ಪಡೆದ ಸೇವಾ ಅನುಭವದ ಆಧಾರದ ಮೇಲೆ ಅರ್ಹತಾ ಪಟ್ಟಿಯನ್ನು ತಯಾರಿಸಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಚುರಪಡಿಸಲಾಗುವುದು.
- ಸದರಿ ತಾತ್ಕಾಲಿಕ ಮೇರಿಟ್ ಪಟ್ಟಿಗೆ ಆಕ್ಷೇಪಣೆ ಆಹ್ವಾನಿಸಿ ಸಲ್ಲಿಕೆಯಾದ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲನೆ ಮಾಡಿ ಅಂತಿಮ ಮೇರಿಟ್ ಪಟ್ಟಿಯನ್ನು ಪ್ರಕಟಣೆಗೊಳಿಸಲಾಗುವುದು.
- ಸದರಿ ಅಂತಿಮ ಮೇರಿಟ್ ಪಟ್ಟಿಯಲ್ಲಿ ಗರಿಷ್ಟ ಅಂಕಗಳನ್ನು ಪಡೆದ ಅಭ್ಯರ್ಥಿಗಳನ್ನು ಸಂಬಂಧಪಟ್ಟ ಹುದ್ದೆಗಳ ಅನುಗುಣವಾಗಿ ಆಯ್ಕೆಗೆ ಪರಿಗಣಿಸಲಾಗುವುದು.
- ಸಂದರ್ಶನ ಇರುವುದಿಲ್ಲ.
- ಖಾಲಿ ಹುದ್ದೆಗಳನ್ನು ಹೆಚ್ಚಿಸುವ ಅಥವಾ ಕಡಿಮೆ ಮಾಡುವ ಅಧಿಕಾರವು ನೇಮಕಾತಿ ಪ್ರಾಧಿಕಾರಿ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿ.ಪಂ.ರಾಯಚೂರುರವರು ಹೊಂದಿರುತ್ತಾರೆ.

## ಮಾಸಿಕ ಸಂಭಾವನೆ:-

- ತಾಂತ್ರಿಕ ಸಹಾಯಕ (ಸಿವಿಲ್) ಹುದ್ದೆಗೆ ಮಾಸಿಕ ಸಂಭಾವನೆ ರೂ.24,000/-ಗಳು (ಡಿಪ್ಲೋಮಾ ಅಭ್ಯರ್ಥಿಗಳಿಗೆ ರೂ.22,000/-ಗಳು ಹಾಗೂ ಪ್ರಯಾಣ ಭತ್ಯೆ ರೂ.2,000/-ಗಳು
- ತಾಂತ್ರಿಕ ಸಹಾಯಕ (ಕೃಷಿ, ಅರಣ್ಯ, ತೋಟಗಾರಿಕೆ) ಹುದ್ದೆಗೆ ಮಾಸಿಕ ಸಂಭಾವನೆ ರೂ.24,000/-ಗಳು (ಹಾಗೂ ಪ್ರಯಾಣ ಭತ್ಯೆ ರೂ.2,000/-ಗಳು

## ಆಯ್ಕೆಯ ವಿಧಾನ:-

ಈ ಕೆಳಕಂಡ ವಿಧಾನವನ್ನು ಅಳವಡಿಸಿ ಮೆರಿಟ್ ಪಟ್ಟಿ ಸಿದ್ದಪಡಿಸಿ ಮೆರಿಟ್ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುವುದು.

## ಹುದ್ದೆ:- ತಾಂತ್ರಿಕ ಸಹಾಯಕ (TAE CIVIL)

1. ಕನಿಷ್ಠ ವಿದ್ಯಾರ್ಹತೆಗೆ -100 ಅಂಕಗಳು
2. ಸ್ನಾತಕೊತ್ತರ ಪದವಿಗೆ -10 ಅಂಕಗಳು
3. ನಿಗದಿಪಡಿಸಿದ ಅನುಭವಕ್ಕೆ- 10 ಅಂಕಗಳು ಗರಿಷ್ಠ

   (ನಿಗದಿಪಡಿಸಿದ 36 ತಿಂಗಳು ಅಥವಾ ಹೆಚ್ಚಿನ ಅವಧಿಯ ಅನುಭವಕ್ಕೆ ಗರಿಷ್ಠ 10 ಅಂಕಗಳು (ಅಂದರೆ ಪ್ರತಿ ತಿಂಗಳ ಅನುಭವಕ್ಕೆ 0.28 ಅಂಕಗಳಂತೆ ಸಂಕಲನ ಮಾಡುವುದು) ಒಟ್ಟು -120 ಅಂಕಗಳು

## ಹುದ್ದೆ:- ತಾಂತ್ರಿಕ ಸಹಾಯಕ ಕೃಷಿ/ತೋಟಗಾರಿಕೆ/ಅರಣ್ಯ

1. ಕನಿಷ್ಠ ವಿದ್ಯಾರ್ಹತೆಗೆ -100 ಅಂಕಗಳು
2. ಸ್ನಾತಕೊತ್ತರ ಪದವಿಗೆ -10 ಅಂಕಗಳು
3. ನಿಗದಿಪಡಿಸಿದ ಅನುಭವಕ್ಕೆ- 10 ಅಂಕಗಳು ಗರಿಷ್ಠ

   (ನಿಗದಿಪಡಿಸಿದ 36 ತಿಂಗಳು ಅಥವಾ ಹೆಚ್ಚಿನ ಅವಧಿಯ ಅನುಭವಕ್ಕೆ ಗರಿಷ್ಠ 10 ಅಂಕಗಳು (ಅಂದರೆ ಪ್ರತಿ ತಿಂಗಳ ಅನುಭವಕ್ಕೆ 0.28 ಅಂಕಗಳಂತೆ ಸಂಕಲನ ಮಾಡುವುದು) ಒಟ್ಟು -120 ಅಂಕಗಳು

19.11.2022

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಜಿಲ್ಲಾ ಪಂಚಾಯತ್, ರಾಯಚೂರು

ಪ್ರತಿಯನ್ನು :-

1. ಆಯುಕ್ತರು ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ , ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬೆಂಗಳೂರು, ಇವರಿಗೆ ಮಾಹಿತಿಗಾಗಿ ಮಾನ್ಯರ ಆಪ್ತ ಶಾಖೆಯ ಮೂಲಕ ಸಲ್ಲಿಸಲಾಗಿದೆ.

2. ತಾಂತ್ರಿಕ ನಿರ್ದೇಶಕರು, ಜಿಲ್ಲಾ ಎನ್.ಐ.ಸಿ. ಘಟಕ ಜಿ.ಪಂ. ರಾಯಚೂರು ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸುತ್ತಾ **ಆನ್ ಲೈನ್ NIC ಜಿಲ್ಲಾ ವೆಬ್ ಸೈಟ್ ನಲ್ಲಿ ಅರ್ಜಿ ನಮೂನೆಯನ್ನು ಆಯ್ಕೆ ವಿಧಾನ & ನಿಗಧಿಪಡಿಸಿದ ವಿದ್ಯಾರ್ಹತೆಗನುಗುಣವಾಗಿ ಕ್ರಮ ಕೈಗೊಂಡು ನಿಗಧಿತ ದಿನಾಂಕ ದಂದು ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅನುವು ಮಾಡಿಕೊಡುವುದು.**

3. ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಇಲಾಖೆ, ಬಳ್ಳಾರಿ ಇವರು ಜಿಲ್ಲಾ ಮತ್ತು ರಾಜ್ಯಮಟ್ಟದ ಪ್ರಚಲಿತ ದಿನಪತ್ರಿಕೆಗಳಲ್ಲಿ ಪ್ರಚಾರಪಡಿಸಲು ಸೂಚಿಸಿದೆ.